# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1362 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22.08.2025 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಯಾಣ ಕರ್ನಾಟಕ ಭಾಗದಲ್ಲಿ ಅವಧಿ ಪೂರ್ವ ಕಡಿಮೆ ತೂಕ ಹಾಗೂ ಅನಾರೋಗ್ಯ ಪೀಡಿತ ಶಿಶುಗಳಿಗೆ ತಾಯಿಯ ಎದೆ ಹಾಲಿನಲ್ಲಿ ಕೊರತೆ (ಅಪೌಷ್ಟಿಕತೆ)ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ನವಜಾತ ಶಿಶುಗಳಲ್ಲಿ ಅವಧಿಪೂರ್ವ ಜನನ ಅಥವಾ ಕಡಿಮೆ ತೂಕ (Low Birth Weight) ಗರ್ಭಾವಸ್ಥೆಯಲ್ಲಿನ ಪೋಷಕಾಂಶ ಕೊರತೆಯ ಸೂಚಕವಾಗಿದ್ದು, ಇಂತಹ ಶಿಶುಗಳು ವಿವಿಧ ಕಾರಣಗಳಿಂದ ವಿಶೇಷ ನವಜಾತ ಶಿಶು ಆರೈಕೆ ಘಟಕಗಳಲ್ಲಿ (Special Newborn Care Units) ದಾಖಲಾಗುವ ಸಂದರ್ಭದಲ್ಲಿ ತಾಯಿಯ ಸ್ವಂತ ಹಾಲನ್ನು ಮೊದಲ ಆದ್ಯತೆಯಾಗಿ ನೀಡಲಾಗುತ್ತದೆ. ವಿರಳ ಸಂದರ್ಭಗಳಲ್ಲಿ ಮಾತ್ರ ತಾಯಿಯ ಎದೆಹಾಲಿನ ಕೊರತೆ ಉಂಟಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ಈ ರೀತಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ತಾಯಿ ಮತ್ತು ಶಿಶುಗಳ ಸಂಖ್ಯೆ ಎಷ್ಟು; | ತಾಯಿಯ ಎದೆಹಾಲಿನ ಕೊರತೆ ಸಾಮಾನ್ಯವಾಗಿ ತಾತ್ಕಾಲಿಕವಾದ ದೈಹಿಕ ಸ್ಥಿತಿಯಾಗಿದ್ದು, ವೈದ್ಯಕೀಯ ಸಲಹೆ ಮತ್ತು ಬೆಂಬಲದ ಮೂಲಕ ಸರಿಯಾಗುತ್ತದೆ.<br><br>ಅವಧಿ ಪೂರ್ವ ಜನನ ಅಥವಾ ಕಡಿಮೆ ತೂಕ ಹೊಂದಿದ ನವಜಾತ ಶಿಶುಗಳ ಪೌಷ್ಟಿಕ ಅಗತ್ಯತೆಗಳನ್ನು ವಿಶೇಷ ನವಜಾತ ಶಿಶು ಆರೈಕೆ ಘಟಕಗಳಲ್ಲಿ ತಾಯಿಯ ಸ್ವಂತ ಹಾಲು ಅಥವಾ ಅಗತ್ಯವಿದ್ದಲ್ಲಿ ಪಾಶ್ಚರೀಕರಿಸಿದ ಬೇರೆ ತಾಯಂದಿರ ಹಾಲನ್ನು ನೀಡುವ ಮೂಲಕ ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ.<br><br>ಕಲ್ಯಾಣ ಕರ್ನಾಟಕ ಭಾಗದಲ್ಲಿ 2024-25ನೇ ಸಾಲಿನಲ್ಲಿ ಒಟ್ಟು **363** ಗರ್ಭಿಣಿಯರಲ್ಲಿ ಅಪೌಷ್ಟಿಕತೆ (ತೀವ್ರ ರಕ್ತ ಹೀನತೆ) ಇರುವುದು ಕಂಡುಬಂದಿದೆ ಹಾಗೂ ಅಪೌಷ್ಟಿಕತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಕೈಗೊಳ್ಳಲಾದ ಕ್ರಮಗಳನ್ನು **ಅನುಬಂಧ-1ರಲ್ಲಿ ನೀಡಲಾಗಿದೆ.** |
| ಇ) | ಈ ಅಪೌಷ್ಟಿಕತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಅಂಗನವಾಡಿ ಕೇಂದ್ರಗಳಲ್ಲಿ 0-5 ವರ್ಷದೊಳಗಿನ ಮಕ್ಕಳು ವೈದ್ಯರಿಂದ ತಪಾಸಣೆಗೊಳಪಟ್ಟಲ್ಲಿ ತೀವ್ರ ಅಪೌಷ್ಟಿಕತೆಯುಳ್ಳ ಮಕ್ಕಳನ್ನು ಪೌಷ್ಟಿಕ ಪುನಶ್ಚೇತನ ಕೇಂದ್ರಗಳಿಗೆ ರೆಫರ್ ಮಾಡಿದ್ದಲ್ಲಿ, ಅಂತಹ ಮಕ್ಕಳನ್ನು ಪೌಷ್ಟಿಕ ಪುನಶ್ಚೇತನ ಕೇಂದ್ರಗಳಿಗೆ ದಾಖಲಿಸಿ, ತಜ್ಞ ವೈದ್ಯರಿಂದ ಪೂರ್ಣರೂಪದ ವೈದ್ಯಕೀಯ ತಪಾಸಣೆ, ಅಗತ್ಯ ಚಿಕಿತ್ಸೆ ಹಾಗೂ ಪೂರಕ ಪೌಷ್ಟಿಕ ಆಹಾರವನ್ನು ಒದಗಿಸಲಾಗುತ್ತದೆ. ಪೌಷ್ಟಿಕ ಪುನಶ್ಚೇತನ ಕೇಂದ್ರಗಳಲ್ಲಿ ಮಕ್ಕಳಿಗೆ ನೀಡುತ್ತಿರುವ ಸೇವೆಗಳನ್ನು **ಅನುಬಂಧ-2ರಲ್ಲಿ ನೀಡಲಾಗಿದೆ.**<br><br>ರಾಜ್ಯದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ಅನುದಾನಿತ 33 ಜಿಲ್ಲಾ ಮಟ್ಟದ ಪೌಷ್ಟಿಕ ಪುನಶ್ಚೇತನ ಕೇಂದ್ರಗಳು ಹಾಗೂ ರಾಜ್ಯ ಅನುದಾನಿತ 86 ತಾಲ್ಲೂಕು ಪೌಷ್ಟಿಕ ಪುನಶ್ಚೇತನ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. |

...2

| | | |
|---|---|---|
| | | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br><br>ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಕಲ್ಯಾಣ ಕರ್ನಾಟಕ ಭಾಗದ 07 ಜಿಲ್ಲೆಗಳಲ್ಲಿ ಒಟ್ಟಾರೆ ಗುರುತಿಸಲಾದ ತೀವ್ರ ಅಪೌಷ್ಠಿಕ ಮಕ್ಕಳು ಹಾಗೂ ಸಾಧಾರಣ ಅಪೌಷ್ಠಿಕ ಮಕ್ಕಳ ಜಿಲ್ಲಾವಾರು ವಿವರವನ್ನು **ಅನುಬಂಧ-3ರಲ್ಲಿ ನೀಡಲಾಗಿದೆ.**<br><br>ಅಪೌಷ್ಠಿಕತೆ ನಿವಾರಣೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮುಖಾಂತರ ಕೈಗೊಂಡಿರುವ ಕ್ರಮಗಳ ವಿವರವನ್ನು **ಅನುಬಂಧ-4 ರಲ್ಲಿ ನೀಡಲಾಗಿದೆ.** |
| ಈ) | ಅಮೃತಧಾರೆ ಯೋಜನೆಯಲ್ಲಿ ಈ ಅಪೌಷ್ಠಿಕತೆಯನ್ನು ಹೋಗಲಾಡಿಸಲು ಅಗತ್ಯವಿರುವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆಯೇ? | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ "ಅಮೃತಧಾರೆ" ಸ್ವತಂತ್ರ ಯೋಜನೆ ಆಗಿರದೆ, ತಾಯಿಯ ಎದೆ ಹಾಲಿನ ಸಮಗ್ರ ನಿರ್ವಹಣಾ ಕೇಂದ್ರಗಳಿಗೆ (Comprehensive Lactation Management Centres – CLMC) ನೀಡಲಾದ ನಾಮಮಾತ್ರವಾಗಿದೆ. ತಾಯಿಯ ಎದೆ ಹಾಲನ್ನು ಸಂಗ್ರಹಿಸಿ, ಪಾಶ್ಚರೀಕರಿಸಿ ಮತ್ತು ಸುರಕ್ಷಿತವಾಗಿ ಶೇಖರಿಸಿ, ಆಸ್ಪತ್ರೆಯೊಳಗಿನ ಅವಶ್ಯ ನವಜಾತ ಶಿಶುಗಳಿಗೆ ಒದಗಿಸುವ ಉದ್ದೇಶದಿಂದ ರಾಜ್ಯದ ಒಟ್ಟು ಹತ್ತು (10) ಆಸ್ಪತ್ರೆಗಳಲ್ಲಿ ತಾಯಿಯ ಎದೆ ಹಾಲಿನ ಸಮಗ್ರ ನಿರ್ವಹಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅದರಲ್ಲಿ, ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆ (GIMS), ಕಲಬುರ್ಗಿ ಜಿಲ್ಲೆ ಮತ್ತು ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ (VIMS), ಬಳ್ಳಾರಿ ಜಿಲ್ಲೆ ಈ ಎರಡು ಕೇಂದ್ರಗಳು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸ್ಥಾಪಿಸಲ್ಪಟ್ಟಿವೆ . |

**ಸಂಖ್ಯೆ: ಆಕುಕ 89 ಎಸ್.ಟಿ.ಕ್ಯೂ 2025**

**( ದಿನೇಶ್ ಗುಂಡೂರಾವ್ )**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅನುಬಂಧ-**1**(ಪ್ರಶ್ನೆ ಸಂಖ್ಯೆ-1362)

**ಅಪೌಷ್ಟಿಕತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು [illegible] ಕೈಗೊಂಡಿದೆ.**

1. ಅಪೌಷ್ಟಿಕತೆಯಿಂದ ಬಳಲುತ್ತಿರುವ ಗರ್ಭಿಣಿ ಮತ್ತು ಬಾಣಂತಿಯರಿಗೆ ದಿನಕ್ಕೆ 2 ಬಾರಿಯಂತೆ ಒಟ್ಟು 6 ತಿಂಗಳಿಗೆ 360 IFA ಮಾತ್ರೆಗಳನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನೀಡಲಾಗುತ್ತಿದೆ. ರಕ್ತದ ಹೀಮೋಗ್ಲೋಬಿನ್ ಹೆಚ್ಚಿಸಲು ಈ ಮಾತ್ರೆಗಳನ್ನು ಸಮುದಾಯ ಆರೋಗ್ಯಾಧಿಕಾರಿಗಳು (CHOs), ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಆಶಾ ಕಾರ್ಯಕರ್ತೆಯರು ಮತ್ತು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ವಿತರಿಸಲಾಗುತ್ತಿದೆ
2. ಗರ್ಭಾವಸ್ಥೆಯಲ್ಲಿ ರಕ್ತ ಅಪೌಷ್ಟಿಕತೆಯನ್ನು ತಡೆಗಟ್ಟಲು 4 ನೇ ತಿಂಗಳಿನಲ್ಲಿ ಆಲ್‌ಬೆಂಡೋಜೋಲ್ ಮಾತ್ರೆ ಎಲ್ಲಾ ವರ್ಗದ ಗರ್ಭಿಣಿಯರಿಗೆ ನೀಡಲಾಗುತ್ತಿದೆ ಮತ್ತು ಇದರ ಸೇವನೆ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಈ ಮಾತ್ರೆಯಿಂದ ಹೊಟ್ಟೆಯಲ್ಲಿರುವ ರಕ್ತವನ್ನು ಹೀರುವ ಜಂತು ಉಳುಗಳನ್ನು ನಾಶಪಡಿಸಲಾಗುತ್ತದೆ ಮತ್ತು ಆಹಾರದಲ್ಲಿನ ಪೌಷ್ಮಕತೆಯನ್ನು ಗರ್ಭಿಣಿಯ ದೇಹವು ಹೀರಿಕೊಳ್ಳಲು ಅನುವು ಮಾಡಿಕೊಡುತ್ತದೆ.

3. ಕರ್ನಾಟಕ ರಾಜ್ಯದಲ್ಲಿ ಗರ್ಭಾವಸ್ಥೆಯಲ್ಲಿ ಅಪೌಷ್ಟಿಕತೆಯನ್ನು ತಡೆಗಟ್ಟಲು iron sucrose ಚುಚ್ಚುಮದ್ದನ್ನು ತೀವ್ರತರ ರಕ್ತ ಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಬಾಣಂತಿಯರಿಗೆ ಅಲ್ಲದೆ ಮಾಧ್ಯಮಿಕ ಅಂದರೆ Hb % 10 ಗ್ರಾಂ ಗಿಂತ ಕೆಳಗಡೆ ಇರುವ ಎಲ್ಲಾ ಗರ್ಭಿಣಿ ಬಾಣಂತಿಯರಿಗೂ ನೀಡಲಾಗುತ್ತಿದೆ.
4. ಅಧಿಕ ರಕ್ತ ಸ್ರಾವವನ್ನು ತಡೆಗಟ್ಟಲು ಪ್ರಸವ ನಂತರ ಕಾರ್ಬಿಟೋಸಿನ್ ಚುಚ್ಚು ಮದ್ದನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

5. ಗರ್ಭಾವಸ್ಥೆಯಲ್ಲಿ ರಕ್ತ ಹೀನತೆಯನ್ನು ತಡೆಗಟ್ಟಲು ಎಫ್ ಸಿ ಎಂ ಚುಚ್ಚುಮದ್ದನ್ನು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಬಳಸಲಾಗುತ್ತಿದೆ.

6. ತೀವ್ರತರ ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಮತ್ತು ಬಾಣಂತಿಯರಿಗೆ ಉಚಿತವಾಗಿ JSSK ಕಾರ್ಯಕ್ರಮದಡಿಯಲ್ಲಿ Blood Transfusion ವ್ಯವಸ್ಥೆ ಮಾಡಲಾಗಿದೆ.
7. ಎಲ್ಲಾ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಟಿಕತೆಯ ಬಗ್ಗೆ ಮನೆಯಲ್ಲಿ ಸೇವಿಸಬೇಕಾದ ಆಹಾರದ ಬಗ್ಗೆ ಆಪ್ತ ಸಮಾಲೋಚನೆಯನ್ನು ಎಲ್ಲಾ ಹಂತದ ಆರೋಗ್ಯ ಕೇಂದ್ರಗಳಲ್ಲಿ ನೀಡಲಾಗುತ್ತಿದೆ. ಇದರಿಂದ ಪೌಷ್ಟಿಕಾಂಶದ ಆಹಾರದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

19/8/25

ಉಪ ನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಬೆಂಗಳೂರು-560 009



ile No. HFW/89/STQ/2025-FW-HEALTH AND FAMILY WELFARE SEC (Computer No. 1879949)
enerated from eOffice by VIDHYASHREE K, HFW-ASST1 (VS), ASSISTANT, HEALTH AND FAMILY WELFARE SEC on 21/08/2025 01:46 PM

## ಅನುಬಂಧ – ೨

## ಪೌಷ್ಠಿಕ ಪುನಶ್ಚೇತನ ಕೇಂದ್ರಗಳಲ್ಲಿ ಮಕ್ಕಳಿಗೆ ನೀಡಲಾಗುತ್ತಿರವ ಸೇವೆಗಳು

- ದಾಖಲಾಗಿರುವ ಅಪೌಷ್ಠಿಕತೆಯುಳ್ಳ ಮಕ್ಕಳಿಗೆ Appetite Test ಮಾಡಲಾಗಿ ತದನಂತರ ತಪಾಸಣೆಯ ವರದಿಯನುಗುಣ ಪ್ರತಿಯೊಂದು ಮಗುವಿಗೆ ಪೌಷ್ಠಿಕ ಆಹಾರವನ್ನು NRC ಯಲ್ಲಿ ತಯಾರಿಸಿ ನೀಡಲಾಗುವುದು.
- ದಾಖಲಾಗಿರುವ ಮಗುವಿಗೆ Sensory Stimulation ಹಾಗೂ Play Therapy ಸೌಲಭ್ಯವನ್ನು ನೀಡಲಾಗುವುದು.
- ತಾಲ್ಲೂಕು ಪೌಷ್ಠಿಕ ಪುನಶ್ಚೇತನ ಕೇಂದ್ರಗಳಿಗೆ ಭಾರತ ಸರ್ಕಾರದ MGNREGAಯ ಅನುಗುಣವಾಗಿ ದಾಖಲಾಗಿರುವ ತಾಯಿ/ಪೋಷಕರಿಗೆ ವೇತನ ನಷ್ಟ ದಿನಗೂಲಿ ಭತ್ಯೆ ದಿನಒಂದಕ್ಕೆ ರೂ. 370/- ಹಾಗೂ ಜಿಲ್ಲಾ ಪೌಷ್ಠಿಕ ಪುನಶ್ಚೇತನ ಕೇಂದ್ರಗಳಲ್ಲಿ ರೂ. 100/- ಅನ್ನು ಕೇಂದ್ರ ಸರ್ಕಾರದ ಅನುಮೋದನೆಯಂತೆ, ಉಳಿದ ರೂ. 270/- ಅನ್ನು ರಾಜ್ಯ ಅನುದಾನದಡಿ ನೀಡಲಾಗಿದೆ, ತಾಯಿ/ಪೋಷಕರಿಗೆ ಊಟೋಪಚಾರಕ್ಕೆ ದಿನವೊಂದಕ್ಕೆ ಜಿಲ್ಲಾ NRC ಯಲ್ಲಿ ರೂ.100/- ಹಾಗೂ ತಾಲ್ಲೂಕು NRCಯಲ್ಲಿ ರೂ.125/-, ಹಾಗೂ ದಾಖಲಾದ ಮಗುವಿಗೆ ಔಷಧಿಗೆ ದಿನವೊಂದಕ್ಕೆ ರೂ.125/-, ಜಿಲ್ಲಾ ಹಾಗೂ ತಾಲ್ಲೂಕು NRC ಗಳಿಗೆ ಮತ್ತು ಊಟೋಪಾಚಾರಕ್ಕೆ ದಿನವೊಂದಕ್ಕೆ ರೂ.125/- ನೀಡಲಾಗುತ್ತಿದೆ.
- ಮಕ್ಕಳಿಗೆ 14 ದಿನಗಳವರೆಗೆ ಉಚಿತ ಅಪೌಷ್ಠಿಕತೆ ನಿವಾರಣೆ ಸೇವೆಗಳನ್ನು ನೀಡಲಾಗುವುದು.
- ಪೌಷ್ಠಿಕ ಆಹಾರ ನೀಡಿಕೆಯ ಮಹತವದ ಬಗ್ಗೆ ಹಾಗ ಸ್ಥಳೀಯವಾಗಿ ಮನೆಯಲ್ಲಿಯೇ ಉತ್ತಮ ಪೌಷ್ಠಿಕ ಆಹಾರ ತಯಾರಿಕೆ ಬಗ್ಗೆ ತರಬೇತಿಯನ್ನು ನೀಡಲಾಗುವುದು.
- ಹುಟ್ಟಿನಿಂದ 6 ತಿಂಗಳವರೆಗೆ ಕೇವಲ ಎದೆಹಾಲು ಮಾತ್ರ ನೀಡುವಿಕೆ ಹಾಗೂ ಎದೆಹಾಲಿನ ಮಹತ್ವದ ಬಗ್ಗೆ ಅರಿವು ನೀಡಲಾಗುತ್ತಿದೆ.
- ಮಕ್ಕಳಿಗೆ ಆಟದ ರೂಪದ ಚಿಕಿತ್ಸಾಸೇವೆ ಒದಗಿಸಲಾಗುತ್ತಿದೆ.
- ಆಶಾ ಕಾರ್ಯಕರ್ತರಿಗೆ ಪೌಷ್ಠಿಕ ಪುನಶ್ಚೇತನ ಕೇಂದ್ರಗಳಿಗೆ ವೈದ್ಯಕೀಯ ತೊಡಕುವುಳ್ಳ ತೀವ್ರ ಅಪೌಷ್ಠಿಕತೆ ಇರುವ ಮಕ್ಕಳನ್ನು ದಾಖಲಿಸಲು, ಪೌಷ್ಠಿಕ ಪುನಶ್ಚೇತನ ಕೇಂದ್ರದಿಂದ ಬಿಡುಗಡೆಯಾದ ನಂತರ ನಿಯಮಿತವಾಗಿ 1,2,4 ಹಾಗೂ 8 ವಾರಗಳಲ್ಲಿ NRC ಯಲ್ಲಿ Follow up ಗಾಗಿ ಈ ಕೆಳಕಂಡಂತೆ ಆಶಾ ಪ್ರೋತ್ಸಾಹಧನದವನ್ನು ನೀಡಲಾಗುವುದು

| | | |
|---|---|---|
| 1 | ವೈದ್ಯಕೀಯ ತೊಡಕುಳ್ಳ ತೀವ್ರ ಅಪೌಷ್ಠಿಕತೆಯಿದ್ದ ಮಗುವನ್ನು ಪೌಷ್ಠಿಕ ಪುನಶ್ಚೇತನಕ್ಕೆ ಕರೆತಂದು ದಾಖಲಿಸಿದ್ದಲ್ಲಿ | ರೂ. 100/- |
| 2 | ಪೌಷ್ಠಿಕ ಪುನಶ್ಚೇತನ ಕೇಂದ್ರದಿAದ ಬಿಡುಗಡೆಯಾದ ಒಂದು ವಾರದ ನಂತರ ಪೌಷ್ಠಿಕ ಪುನಶ್ಚೇತನ ಕೇಂದ್ರದಲ್ಲಿ Followup ಗೊಳಿಸಿದ್ದಲ್ಲಿ | ರೂ.50/- |
| 3 | ಪೌಷ್ಠಿಕ ಪುನಶ್ಚೇತನ ಕೇಂದ್ರದಿAದ ಬಿಡುಗಡೆಯಾದ ಎರಡು ವಾರದ ನಂತರ ಪೌಷ್ಠಿಕ ಪುನಶ್ಚೇತನ ಕೇಂದ್ರದಲ್ಲಿ Followup ಗೊಳಿಸಿದ್ದಲ್ಲಿ | ರೂ.25/- |
| 4 | ಪೌಷ್ಠಿಕ ಪುನಶ್ಚೇತನ ಕೇಂದ್ರದಿAದ ಬಿಡುಗಡೆಯಾದ ನಾಲ್ಕು ವಾರದ ನಂತರ ಪೌಷ್ಠಿಕ ಪುನಶ್ಚೇತನ ಕೇಂದ್ರದಲ್ಲಿ Followup ಗೊಳಿಸಿದ್ದಲ್ಲಿ | ರೂ.25/- |
| 5 | ಪೌಷ್ಠಿಕ ಪುನಶ್ಚೇತನ ಕೇಂದ್ರದಿAದ ಬಿಡುಗಡೆಯಾದ ಎಂಟು ವಾರದ ನಂತರ ಪೌಷ್ಠಿಕ ಪುನಶ್ಚೇತನ ಕೇಂದ್ರದಲ್ಲಿ Followup ಗೊಳಿಸಿದ್ದಲ್ಲಿ | ರೂ.50/- |
| 6 | ಹೆಚ್ಚುವರಿಯಾಗಿ ಪೌಷ್ಠಿಕ ಪುನಶ್ಚೇತನ ಕೇಂದ್ರದಲ್ಲಿ ಮಗುವು ತೀವ್ರ ಅಪೌಷ್ಠಿಕತೆಯಿಂದ ಮುಕ್ತವಾಗಿರುವುದು ದೃಢೀಕರಿಸಿದ ನಂತರ | ರೂ.50/- |

ಉಪ ನಿರ್ದೇಶಕರು (ಪೌಷ್ಠಿಕ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆರೋಗ್ಯ ಸೌಧ, ಬೆಂಗಳೂರು



ile No. HFW/89/STQ/2025-FW-HEALTH AND FAMILY WELFARE SEC (Computer No. 1879949)
ienerated from eOffice by VIDHYASHREE K, HFW-ASST1 (VS), ASSISTANT, HEALTH AND FAMILY WELFARE SEC

ಅನುಬಂಧ-3

ಕಲ್ಯಾಣ ಕರ್ನಾಟಕ ಭಾಗದ ಪೋಷಣ್ ಟ್ರ್ಯಾಕರ್ ತಂತ್ರಾಂಶದಲ್ಲಿ ತೀವ್ರ ಅಪೌಷ್ಟಿಕ ಮಕ್ಕಳ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳ ಸಂಖ್ಯೆ

ಜಿಲ್ಲಾವಾರು ಪಟ್ಟಿ

| Sl. No | District | Total Active Children Registered in the AWC for the Month | Total Active Children measured (Height & Weight) for the Month | Measurement efficiency (%) | SAM (N) | SAM (%) | MAM (N) | MAM (%) |
|---|---|---|---|---|---|---|---|---|
| 1 | Vijayanagara | 98623 | 95088 | **96.42** | 821 | **0.86** | 5080 | **5.34** |
| 2 | Yadgir | 101123 | 95193 | **94.14** | 696 | **0.73** | 4727 | **4.97** |
| 3 | Koppal | 112042 | 111031 | **99.1** | 406 | **0.37** | 4035 | **3.63** |
| 4 | Raichur | 152830 | 150272 | **98.33** | 521 | **0.35** | 10725 | **7.14** |
| 5 | Bellary | 97102 | 93760 | **96.56** | 293 | **0.31** | 3098 | **3.3** |
| 6 | Kalaburagi | 202281 | 195578 | **96.69** | 431 | **0.22** | 9557 | **4.89** |
| 7 | Bidar | 119913 | 118550 | **98.86** | 218 | **0.18** | 6300 | **5.31** |
| **Total** | | **883914** | **859472** | **97.23** | **3386** | **0.39** | **43522** | **5.06** |

14/8/24

ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.

## ಅನುಬಂಧ-4

**ಮಕ್ಕಳ ಅಪೌಷ್ಠಿಕತೆ ನಿವಾರಣೆಗೆ ಸರ್ಕಾರದ ವತಿಯಿಂದ ಕೈಗೊಂಡ ಕ್ರಮಗಳು ಕೆಳಕಂಡಂತಿವೆ:**

**1. ಪೂರಕ ಪೌಷ್ಠಿಕ ಆಹಾರ :**

**(ಎ) ಮಾತೃಪೂರ್ಣ ಯೋಜನೆ :** ಮಾತೃಪೂರ್ಣ ಯೋಜನೆಯನ್ನು 2017 ಅಕ್ಟೋಬರ್ 2ನೇ ತಾರೀಖಿನಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಠಿಕಾಂಶಯುಕ್ತ ಮಧ್ಯಾಹ್ನದ ಬಿಸಿಯೂಟವನ್ನು ಅಂಗನವಾಡಿ ಕೇಂದ್ರದಲ್ಲಿಯೇ ನೀಡಲಾಗುತ್ತದೆ.

ಕೇಂದ್ರ ಸರ್ಕಾರದ ರೂ.4.75 ರ ಅನುದಾನದೊಂದಿಗೆ ರೂ.16.25 ರ ರಾಜ್ಯ ಸರ್ಕಾರದ ಹೆಚ್ಚುವರಿ ಅನುದಾನ ಸೇರಿ ಒಟ್ಟು ರೂ. 21.00 ರ ಘಟಕ ವೆಚ್ಚದಲ್ಲಿ ಗರ್ಭಿಣಿ, ಬಾಣಂತಿಯರಲ್ಲಿ ಅಪೌಷ್ಠಿಕತೆ ಮತ್ತು ರಕ್ತಹೀನತೆ ತಡೆಯಲು ಅನುವಾಗುವಂತೆ ಬಿಸಿಯೂಟವನ್ನು ಸಿದ್ಧಪಡಿಸಿ ಅಂಗನವಾಡಿ ಕೇಂದ್ರದಲ್ಲಿಯೇ ವಿತರಣೆ ಮಾಡಲಾಗುತ್ತಿದೆ.

ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಫಲಾನುಭವಿಗಳ ಇಚ್ಛೆಗನುಸಾರವಾಗಿ ಅಗತ್ಯವಿರುವ ಕಚ್ಚಾ ಆಹಾರ ಸಾಮಗ್ರಿಗಳನ್ನು ಮನೆಗೆ (THR) ವಿತರಿಸಲಾಗುತ್ತಿದೆ ಹಾಗೂ ಅಂಗನವಾಡಿ ಕೇಂದ್ರದಲ್ಲಿಯೇ ಪೌಷ್ಠಿಕಯುಕ್ತ ಬಿಸಿಯೂಟವನ್ನು ಸ್ವೀಕರಿಸಬಹುದಾಗಿದೆ.

**(ಬಿ) ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರ :** ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾದ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 300 ದಿನಗಳ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.

- ಎಲ್ಲಾ ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ಪ್ರತಿದಿನ ರೂ.**8.00** ಮೌಲ್ಯದ **ಪೂರಕ ಪೌಷ್ಠಿಕ ಆಹಾರ**ವನ್ನು ನೀಡಲಾಗುತ್ತಿದೆ.
- **ತೀವ್ರ ಅಪೌಷ್ಠಿಕ** ಮಕ್ಕಳಿಗೆ ಪ್ರತಿ ದಿನ ರೂ.12.00 ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.
- ಅಂಗನವಾಡಿಗೆ ಹಾಜರಾಗುವ **3 ವರ್ಷದಿಂದ 6** ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ **2 ದಿನ ಮೊಟ್ಟೆಯನ್ನು** ನೀಡಲಾಗುತ್ತಿದೆ.
- ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿ **6** ತಿಂಗಳಿಂದ 6 ವರ್ಷದ ಎಲ್ಲಾ ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 5 ದಿನ 150 ಮಿ.ಲಿ ಹಾಲನ್ನು (15ಗ್ರಾಂ ಕೆನೆಭರಿತ ಹಾಲಿನಪುಡಿ, 5 ಗ್ರಾಂ ಸಕ್ಕರೆ) ನೀಡಲಾಗುತ್ತಿದೆ.
- 6 ತಿಂಗಳಿಂದ 3 ವರ್ಷದ ತೀವ್ರ / ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 20 ಗ್ರಾಂ. ಹಾಲಿನ ಪುಡಿಯನ್ನು ಮನೆಗೆ ವಿತರಿಸಲಾಗುತ್ತಿದೆ.

- 3 ವರ್ಷದಿಂದ 6 ವರ್ಷದ ತೀವ್ರ / ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ಹಾಗೂ 3 ದಿನ 20 ಗ್ರಾಂ. ಹಾಲಿನ ಪುಡಿಯನ್ನು ಮನೆಗೆ ವಿತರಿಸಲಾಗುತ್ತಿದೆ.
- ತೀವ್ರ ಅಪೌಷ್ಠಿಕ ಮಕ್ಕಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪೌಷ್ಠಿಕ ಪುನರ್ವಸತಿ ಕೇಂದ್ರ (NRC) ಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.
- ಆರೋಗ್ಯ ಮತ್ತು ಪೌಷ್ಠಿಕ ಶಿಬಿರಗಳನ್ನು ಏರ್ಪಡಿಸಿ ಅಧಿಕ ಪೌಷ್ಠಿಕತೆಯುಳ್ಳ ಆಹಾರಗಳನ್ನು ತಯಾರಿಸುವ ಕುರಿತು ಮತ್ತು ಮಕ್ಕಳಿಗೆ ಪೌಷ್ಠಿಕತೆಯುಳ್ಳ ಆಹಾರವನ್ನು ನೀಡಲು ಅರಿವು ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಹಾಗೂ ಪೋಷಣ್ ಮಾಸಾಚರಣೆ ಕಾರ್ಯಕ್ರಮದಲ್ಲಿಯೂ ಸಹ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿಶೇಷ ಪೌಷ್ಠಿಕ ಶಿಬಿರಗಳನ್ನು ಆಯೋಜಿಸಲಾಗುತ್ತಿರುತ್ತದೆ.

**2. ಚುಚ್ಚುಮದ್ದು ಕಾರ್ಯಕ್ರಮ:/**

6 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ನಿಗದಿತ ಚುಚ್ಚುಮದ್ದನ್ನು ನೀಡಲಾಗುತ್ತಿದೆ.

**3. ಆರೋಗ್ಯ ತಪಾಸಣೆ:**

ಅಂಗನವಾಡಿ ಕೇಂದ್ರದಲ್ಲಿ ದಾಖಲಾಗಿರುವ ಎಲ್ಲಾ ಮಕ್ಕಳ ಆರೋಗ್ಯ ತಪಾಸಣೆಯನ್ನು ನಿಯಮಿತವಾಗಿ 3 ತಿಂಗಳಿಗೊಮ್ಮೆ (RBSK ಮತ್ತು ವೈದ್ಯಕೀಯ ಅಧಿಕಾರಿಗಳಿಂದ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ನಡೆಸಲಾಗುತ್ತಿದೆ.

**4. ಮಾಹಿತಿ ಸೇವೆ:**

ಅಂಗನವಾಡಿ ಕೇಂದ್ರಗಳಿಗೆ ವೈದ್ಯಾಧಿಕಾರಿಗಳು ಭೇಟಿ ನೀಡಿ ಮಕ್ಕಳ ಆರೋಗ್ಯ ತಪಾಸಣೆ ಮಾಡಿದಾಗ ಹೆಚ್ಚಿನ ತಪಾಸಣೆಗೆ ಅಥವಾ ಚಿಕಿತ್ಸೆಗೆ ತಾಲ್ಲೂಕು ಆರೋಗ್ಯ ಕೇಂದ್ರ / ಜಿಲ್ಲಾ ಆರೋಗ್ಯ ಕೇಂದ್ರಕ್ಕೆ / ಪೌಷ್ಠಿಕ ಪುನರ್ವಸತಿ ಕೇಂದ್ರಗಳಿಗೆ ಕಳುಹಿಸಲು ಸೂಚಿಸುತ್ತಾರೆ. ವೈದ್ಯರು ಸೂಚಿಸಿದಂತೆ ಅಂಗನವಾಡಿ ಕಾರ್ಯಕರ್ತೆಯರು ಹೆಚ್ಚಿನ ಚಿಕಿತ್ಸೆ, ತಪಾಸಣೆಗೆ ಮಕ್ಕಳನ್ನು ಕಳುಹಿಸಿಕೊಡುತ್ತಾರೆ.

12/8/21

ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.